ವೃತ್ತಿಜೀವನವನ್ನು ಪ್ರಾರಂಭಿಸಿದರು. ಕಿನ್ನೀರು ನಾರಾಯಣ ಹೆಗಡೆ, ಭಾಗವತರಾದ ರಾಮಚಂದ್ರ ನಾವುಡ, ಸಾಲಿಗ್ರಾಮ ಮೇಳದ ಚಂಡೆ ಮಾಂತ್ರಿಕ ಕೆಮ್ಮಣ್ಣು ಆನಂದ ಅವರ ಬಳಿಯೂ ಚಂಡೆ ವಾದನದ ಸೂಕ್ಷ್ಮಗಳನ್ನು ಕಲಿತರು. ಮುಂದೆ 'ಶ್ರುತಿಯೊಟ್ಟಿಗೆ ಚಂಡೆಯ ಮೂಲಕ ಸ್ವರವನ್ನೂ ಹುಟ್ಟಿಸಬಹುದು' ಎಂಬ ಮಹಾಬಲ ಹೆಗಡೆಯವರ ನಿಲುವು ಇವರನ್ನು ತಿದ್ದಿತು.

ಕೃಷ್ಣ ಯಾಜಿಯವರಿಗೆ ಚಂಡೆಯೆನ್ನುವದು ಕೇವಲ ಅಬ್ಬರಕ್ಕಾಗಿ ಇರುವ ಸಾಧನವಾಗಿರಲಿಲ್ಲ. ಅದು ಮುಮ್ಮೇಳದಲ್ಲಿ ಅಭಿನಯಿಸುವ ಕಲಾವಿದನಿಗೆ ಪೂರಕವಾಗಿರಬೇಕು ಎನ್ನುವ ಬದ್ಧತೆಯಿತ್ತು. ಕರ್ಣ ತನ್ನ ರಥವನ್ನು ಸಂಭಾಳಿಸಿಕೊಂಡು ಅರ್ಜುನನ ರಥಕ್ಕೆ ಎದುರಾಗುವಾಗ, 'ರಥವನುರೆ ಸಂತೈಸಿಕೊಳ್ಳುತಾ...' ಎನ್ನುವ ಪದ್ಯಕ್ಕೆ ನೆಬ್ಬೂರು ಮತ್ತು ಯಾಜಿಯವರ ಹೊಂದಾಣಿಕೆಯಲ್ಲಿ ದಿಧ್ಧಿತೋಂ ತಾ, ದಿಧ್ಧಿತೋಂ ತಾ ಎನ್ನುವಾಗ ಪ್ರೇಕ್ಷಕನೂ ಆ ವೀರರಸದಲ್ಲಿ ಎದ್ದು ಕುಳಿತುಕೊಳ್ಳುತ್ತಿದ್ದ. ಮುಂದೆ ರಥ ಭೂಮಿಯಲ್ಲಿ ಹೂತು ಹೋದಾಗ ಬರುವ ಪದ್ಯ:

'ಶಿವ ಶಿವಾ ಸಮರದೊಳುss ಕೈ ಸೋತೆನssಲ್ಲಾ
ಭುವನೇಶ ಮಮತೆಯೊಳು'

ನಿರಾಭರಣವಾಗಿದ್ದ ರಂಗಸ್ಥಳದಲ್ಲಿ ರಥ ಓಲಾಡುತ್ತಾ ಕುಸಿವ ದೃಶ್ಯವನ್ನು ಅಮೂರ್ತದಿಂದ ಮೂರ್ತಮಾಡುವ ಗಳಿಗೆ ಅದು. ಪರಂಪರೆಯಲ್ಲಿ ಕರುಣರಸಕ್ಕೆ ಚಂಡೆಯ ಬಿಡ್ತಿಗೆ ಇಲ್ಲ. ಇಂತಹ ಹೊತ್ತಿನಲ್ಲಿ ಯಾಜಿಯವರು ಕೋರೆತಾಳದ ವಿಲಂಬಿತ ಗತಿಯಲ್ಲಿ ಕೇಳಿಯೂ ಕೇಳಿಸದಂತೆ ಚಂಡೆಯ ಶಬ್ದ ಇರುವಂತೆ ನೋಡುತ್ತಿದ್ದರು. ಆ ಹೊತ್ತಿಗೆ ರಂಗದಲ್ಲಿ ಒಂದು ಅವಿಸ್ಮರಣೀಯ ಕುರುಕ್ಷೇತ್ರದ ಚಿತ್ರ ಮೂಡುತ್ತಿತ್ತು. ವೇಷದ ಶಂಭು ಹೋಗಿ ಕುರುಕ್ಷೇತ್ರದಲ್ಲಿ ಅಸಹಾಯಕನಾಗಿ ಒಡೆಯನ ಸಲುವಾಗಿ 'ಅರೆಗಳಿಗೆ ಸೈರಿಸು ಪಾರ್ಥ' ಎಂದು ಅಂಗಲಾಚುವ ದಯನೀಯ ಅವಸ್ಥೆಯ ಕರ್ಣ ಮೂಡುತ್ತಿದ್ದ.

ಅದೇ ಮುಂದೆ, ಕರ್ಣನ ಕರ್ಣಕುಂಡಲ ಹಾಗೂ ಅಮೃತ ಕಲಶಗಳನ್ನು ಕರ್ಣನಿಂದ ದಾನವಾಗಿ ಸ್ವೀಕರಿಸಿದ ಕೃಷ್ಣ ತನ್ನ ನಿಜ ರೂಪವನ್ನು ತೋರಿದಾಗ ಭಕ್ತಿರಸಾಯನದಲ್ಲಿ ಮಿಂದೇಳುವಂತಹ ಭಾವ; ಇಲ್ಲಿ ಮಂದ್ರದಿಂದ ತೀವ್ರಕ್ಕೆ ಹೋಗುವ ಚಂಡೆಯ ನಾದವನ್ನು ಪ್ರೇಕ್ಷಕ ಮರೆಯಲಾರ. ಯಾಜಿಯವರಿಗೆ ಪ್ರಸಂಗ ಪದ್ಯಗಳ ಸಾಹಿತ್ಯದ ಕಲ್ಪನೆ ಚೆನ್ನಾಗಿತ್ತು. 'ಭೀಷ್ಮ ವಿಜಯ'ದಲ್ಲಿ ಅಂಬೆ ಭೀಷ್ಮನನ್ನು ಮಣಿಸಲು ಶಬರನನ್ನು ಕರೆದು ವಿಫಲಳಾಗಿ ಕೊನೆಗೆ ವನದಲ್ಲಿ ತಪಸ್ಸನ್ನಾಚರಿಸಬೇಕು ಎನ್ನುವ ಪದ್ಯದಲ್ಲಿ, 'ವನಕೆ ಪೋಪೆನು/ ತಪವ ಚರಿಪೆನು' ಎನ್ನುವ ಸೊಲ್ಲಿಗೆ ಚಂಡೆಯನ್ನು ಬಾರಿಸುತ್ತಿರಲಿಲ್ಲ. ಅದರ ಮುಂದಿನ ಭಾಗವಾದ – 'ಹನನ ಗೈವೆನು / ಶಪಿಸುತಿವನನು' ಎನ್ನುವಾಗ ಅಂಬೆಯ ರೋಷವನ್ನು ವ್ಯಕ್ತಪಡಿಸಲು ಚಂಡೆಯ ವಾದನದಬ್ಬರ ಸೂಕ್ತ ಎನ್ನುವದನ್ನು ತಿಳಿದು ಬಾರಿಸುತ್ತಿದ್ದರು. ಇಲ್ಲಿ ಕಂಬನಿ ರೋಷದ ಕಟ್ಟೆಯಾಗುವ ಸನ್ನಿವೇಶದಲ್ಲಿ ಆಗುವ ಪರಿಣಾಮ ಅನನ್ಯ.



## ಶಕ್ತಿಯೊಟ್ಟಿಗೆ ಮಿತಿಯೂ ಗೊತ್ತಿತ್ತು

ಚಂಡೆಯ ಶಕ್ತಿಯಷ್ಟೇ ಅಲ್ಲ; ಮಿತಿಯೂ ಕೃಷ್ಣ ಯಾಜಿ ಅವರಿಗೆ ಚೆನ್ನಾಗಿ ಗೊತ್ತಿತ್ತು. ಈ ವಾದನದಲ್ಲಿ ತಬಲಾದ ಡಗ್ಗಾದಂತೆ 'ಧೀ' ಎಂದು ನುಡಿಸಲು ಆಗುವುದಿಲ್ಲ. ಆದರೆ ಸತತ ಪರಿಶ್ರಮದ ಮೂಲಕ ಇದು ಸಾಧ್ಯ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದರು. ಚಂಡೆಯನ್ನು ಸೊಂಟದ ಮಟ್ಟಕ್ಕೆ ವಾಲಿಸಿ ಕೋಲನ್ನು ಸುಮಾರು ನೂರೆಂಬತ್ತು ಡಿಗ್ರಿ ಕೋನದಲ್ಲಿ ಒಂದಕ್ಕೊಂದು ಎದುರಾಗಿ ಇಟ್ಟುಕೊಂಡು ಎಡದ ಬಾಗಿದ ಕೋಲನ್ನು ಚಂಡೆಯ ಮಧ್ಯಕ್ಕೆ ಒತ್ತಿ ಎಳೆಯುತ್ತಾ ಅದರ ಮೇಲೆ ಬಲದ ಕೋಲಿನಿಂದ ಹೊಡೆದು 'ಧೀ' ಶಬ್ದ ಹೊರಡಿಸುವ ಅವರ ಕೈಚಳಕ ಸಹೃದಯರನ್ನು ಮಂತ್ರಮುಗ್ಧವಾಗಿಸುತ್ತಿತ್ತು.

ಚಂಡೆಯ ಕೋಲನ್ನು ಅವರು ಹಿಡಿಯುವ ರೀತಿಯೇ ಆಕರ್ಷಕವಾಗಿತ್ತು. ಕೋಲಿನ ತುದಿಗೆ ಸಣ್ಣ ಗಾಜಿನ ಚೂರೊಂದನ್ನು ಅಂಟಿಸಿರುತ್ತಿದ್ದರು. ಚಂಡೆ ಬಾರಿಸುವಾಗ ಅಲ್ಲಿಂದ ಬೆಳಕು ಪ್ರತಿಫಲಿಸಿ ಬೆಂಕಿಯ ಕಿಡಿ ಹೊರಟಂತೆ ತೋರುತ್ತಿತ್ತು. ಹಲವರು 'ಕುಟ್ಟಣ್ಣ ಬಾರಿಸಿದನೆಂದರೆ ಬೆಂಕಿ ಕಿಡಿ ಏಳ್ತು' ಎಂದೇ ತಿಳಿದುಕೊಂಡಿದ್ದರು!

ಮಂಟಪ ಪ್ರಭಾಕರ ಉಪಾಧ್ಯಾಯರ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನ ಇವರ ವಾದನಕ್ಕೆ ಹೊಸ ಮಜಲನ್ನು ಕೊಟ್ಟಿತೆನ್ನಬಹುದು. ಈ ಕಾರ್ಯಕ್ರಮಕ್ಕೆ ಹಿಮ್ಮೇಳದಲ್ಲಿ ವಿದ್ವಾನ್ ಗಣಪತಿ ಭಟ್ಟರ ಭಾಗವತಿಕೆ, ಅನಂತ ಪದ್ಮನಾಭ ಪಾಠಕರ ಮದ್ದಳೆ ಮತ್ತು ಇವರ ಚಂಡೆ ಪ್ರಸಂಗ ಅಭಿನಯವನ್ನು ರೂಪಕಕ್ಕೆ ಒಯ್ದವು.

ಇತ್ತೀಚೆಗೆ ಕೆರಮನೆ ಶಿವಾನಂದ ಹೆಗಡೆಯವರ ಮಂಡಳಿಯ ಕಲಾವಿದರಾಗಿದ್ದ ಕೃಷ್ಣಯಾಜಿ, ಇಡಗುಂಜಿ ಮಂಡಳಿಯೊಂದಿಗೆ ದೇಶ ವಿದೇಶದಲ್ಲಿ ತಿರುಗಾಡಿ ತಮ್ಮ ಪ್ರತಿಭೆಯನ್ನು ತೋರಿದ್ದರು. ಚಿಟ್ಟಾಣಿ ರಾಮಚಂದ್ರ ಹೆಗಡೆ, ಜಲವಳ್ಳಿಯಿಂದ ಹಿಡಿದು ದಕ್ಷಿಣೋತ್ತರ ಕನ್ನಡದ ಎಲ್ಲಾ ಹೆಸರಾಂತ ಕಲಾವಿದರ ಆಟ ಮತ್ತು ಕೂಟಗಳಲ್ಲಿ ಚಂಡೆ ಮತ್ತು ಮದ್ದಲೆ ಎರಡನ್ನೂ ನುಡಿಸಿದ ಕೆಲವೇ ಕೆಲ ಕಲಾವಿದರಲ್ಲಿ ಇವರೂ ಒಬ್ಬರು. ಕೆರಮನೆ – ಚಿಟ್ಟಾಣಿಯ ಮನೆತನದ ಎಲ್ಲಾ ತಲೆಮಾರಿನ ಕಲಾವಿದರನ್ನು ಕುಣಿಸಿದವರೂ ಸಹ!

ಕೇವಲ ಹೆಸರಾಂತ ಕಲಾವಿದರೊಡನೆ ಮಾತ್ರ ಇವರ ಒಡನಾಟ ಎಂದರೆ ತಪ್ಪಾದೀತು. ಎಲ್ಲೇ ತಾಳಮದ್ದಳೆಯಾಗಲಿ; ಕರೆದರೆ ಇವರು ಬಿಡುವಿದ್ದರೆ ಹೋಗಿ ಅಲ್ಲಿ ಚಂಡೆ ಇಲ್ಲವೇ ಮದ್ದಲೆಯನ್ನು ನುಡಿಸಿಬರುತ್ತಿದ್ದರು. ಇಡಗುಂಜಿಯಲ್ಲಿ ಇವರ ಮನೆಯ ಮತ್ತು ಊರಿನ ಇತರ ತರುಣರು ತಮ್ಮದೇ ಒಂದು ಮೇಳ ಕಟ್ಟಿಕೊಂಡು ಪ್ರದರ್ಶನ ನೀಡುತ್ತಿದ್ದಾರೆ. ಈ ಕೂಟಕ್ಕೆ ಹಿಮ್ಮೇಳದಲ್ಲಿ ಮಾವಿನಕೆರೆ ಯಾಜಿ ಭಾಗವತರ ಮೊಮ್ಮಗ ಗಣೇಶ ಯಾಜಿ, ಭಾಗವತರಾಗಿ ಇದ್ದರೆ ಅವರನ್ನು ಪ್ರೋತ್ಸಾಹಿಸುವ ಸಲುವಾಗಿ ಚಂಡೆಗೆ ಈ ಇಳಿವಯಸ್ಸಿನಲ್ಲಿಯೂ ಸರಿರಾತ್ರಿಯವರೆಗೆ ನುಡಿಸುತ್ತಿದ್ದರು.

## ಚಂಡೆ ನಾದದ ಪ್ರತಿರೂಪ

ಒಂದು ಕಾರ್ಯಕ್ರಮಕ್ಕೆ ಒಪ್ಪಿಕೊಂಡರೆ ಎರಡು ದಿನಗಳ ಮೊದಲೇ ಚಂಡೆಯನ್ನು ತೆಗೆದು ಶ್ರುತಿ ಮಾಡುತ್ತಿದ್ದರು. ಆಗ ಚಂಡೆಯ ಮುಚ್ಚಳವನ್ನು ಬಿಗಿವ ಚರ್ಮದ ದಾರವನ್ನು ಹುರಿಗೊಳಿಸುವ ಕ್ರಿಯೆಯಲ್ಲಿ ಅದನ್ನು ಮೊದಲು ಚೆನ್ನಾಗಿ ತೊಳೆದು ಕಟ್ಟುವಾಗಿ ಒಂದು ಕಾಲಿನಿಂದ ಮೆಟ್ಟಿ ಬಿಗಿಯಬೇಕಾಗಿತ್ತು. ಚಂಡೆಯನ್ನು ಆರಾಧಿಸುತ್ತಿರುವ ಇವರು ಕಾಲಿನಿಂದ ಮೆಟ್ಟಬೇಕಾಗುತ್ತದೆ ಎನ್ನುವ ಕಾರಣಕ್ಕೆ ಆ ಹೊತ್ತಿಗೆ ಕಾಲಿಗೆ ಸಾಕ್ಸ್ ಹಾಕಿಕೊಂಡು ಹುರಿಗೊಳಿಸುತ್ತಿದ್ದರು. ಆಮೇಲೆ ಚಂಡೆಯ ಎಲ್ಲಾ ಹನ್ನೆರಡು ಮನೆಗಳನ್ನು ಒಂದೇ ಶ್ರುತಿಗೆ ಬರುವಂತೆ ಬಿಗಿವ, ಸಡಿಲ ಮಾಡುವ ಕ್ರಿಯೆಯಲ್ಲಿ ಕೋಲಿನಿಂದ ತಟ್ಟುತ್ತಾ ಸ್ವರವನ್ನು ಪರೀಕ್ಷಿಸುತ್ತಿದ್ದರು. ಸರಿ ಅನಿಸಲಿಲ್ಲ ಎಂದಾದರೆ 'ಚಂಡೆ ಸರಿ ಇಲ್ಲ' ಎಂದು ಕಾರ್ಯಕ್ರಮಕ್ಕೆ ಹೋಗದಿರುವುದೂ ಇತ್ತು. ಇವರ ಪಾಲಿಗೆ ಚಂಡೆ ಎನ್ನುವುದು ನಾದದೇವನ ಪ್ರತಿರೂಪ. ಹಾಗಾಗಿ ಕಾರಿನಲ್ಲಿ ಹೋಗುವ ಹೊತ್ತಿಗೆ ಚಂಡೆಯನ್ನು ಡಿಕ್ಕಿಯಲ್ಲಿ ಇಡುತ್ತಿರಲಿಲ್ಲ. ಅದನ್ನು ಕಾಲಿನ ಮೇಲೆಯೇ ಇಟ್ಟುಕೊಂಡು ಪ್ರಯಾಣಿಸುತ್ತಿದ್ದರು.

ಇವರ ಸಾಧನೆಗೆ ರಾಜ್ಯಪ್ರಶಸ್ತಿ, ಗಜಾನನ ಹೆಗಡೆ ಪ್ರಶಸ್ತಿ ಬೆಂಗಳೂರಿನ ಸಪ್ತಕದ ಪ್ರಶಸ್ತಿಯ ಜೊತೆ ಹಲವಾರು ಸಂಘಸಂಸ್ಥೆಗಳು ಸನ್ಮಾನಿಸಿವೆ. ಅದಕ್ಕಿಂತಲೂ ಮುಖ್ಯವಾಗಿ ರಸಿಕರ ಮನವನ್ನು ಗೆದ್ದ ಕಲಾವಿದ ಅವರು. ಮನೆಗೆ ಬಂದರೆ ಅಪ್ಪಟ ಕೃಷಿಕರಾಗುತ್ತಿದ್ದರು. ಅವರ ಪತ್ನಿ ರತ್ನ, ಗಂಡನನ್ನು ಸಂಭಾಳಿಸಿ ಮನೆವಾರ್ತೆಗಳನ್ನು ನೋಡಿಕೊಂಡವರು.

ತಲೆಗೆ ಮುಂಡಾಸು, ಅದರ ಪಟ್ಟಿ ಸ್ಪಷ್ಟವಾಗಿ ಕಾಣುವಂತೆ ಕಟ್ಟಿಕೊಂಡು, ಹಣೆಗೆ ಸಣ್ಣ ಕುಂಕುಮದ ಬೊಟ್ಟು ತೊಟ್ಟು ರಂಗಕ್ಕೆ ಬರುತ್ತಿದ್ದ ಕೋಲುಮುಖದ ನೀಳದೇಹದ ಕುಟ್ಟಣ್ಣ, ಶ್ವೇತ ವಸನಧಾರಿಯಾಗಿ ರಂಗದ ಬಲಗಡೆ ನೆಟ್ಟಗೆ ಮಂದಸ್ಮಿತ ನಗೆಯೊಡನೆ ಕುಳಿತುಕೊಳ್ಳುತ್ತಿದ್ದ ಚಿತ್ರ ಇನ್ನು ನೆನಪು ಮಾತ್ರ.